APRIL 21, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಶಿಕ್ಷಣ, ಸಂಘಟನೆ, ಹೋರಾಟ, ಶೋಷಿತ ವರ್ಗಗಳಿಗೆ ಸ್ವಾಭಿಮಾನದ ಬದುಕು ಕಟ್ಟಿಕೊಡಬಲ್ಲದು – ಮುಖ್ಯಮಂತ್ರಿ ಸಿದ್ದರಾಮಯ್ಯ.**
- **ಧಾರವಾಡದ ಗುಲಗಂಜಿಕೊಪ್ಪದಲ್ಲಿ, ಇಂದು ಬೆಳಗ್ಗೆ 10 ಗಂಟೆಗೆ, ಗಾಂಧಿ ಭವನ ಲೋಕಾರ್ಪಣೆ.**
- **ಇಂದು, ರಾಷ್ಟ್ರೀಯ ನಾಗರಿಕ ಸೇವಾ ದಿನ; ಸೇವಾ ಶ್ರೇ ೃತೆಗಾಗಿ, ಅಧಿಕಾರಿಗಳಿಗೆ ಪುರಸ್ಕಾರ ಪ್ರದಾನ.**
- **'ಭಾರತದಲ್ಲಿ ಸೃಷ್ಟಿಸಿ; ವಿಶ್ವಕ್ಕಾಗಿ ಸೃಷ್ಟಿಸಿ'; ಮುಂಬೈ 'ವೇವ್ಸ್ ವಿಶ್ವ ಶೃಂಗಸಭೆ'ಗೆ, ಪ್ರಧಾನಮಂತ್ರಿ ಮುಂದಾಳತ್ವ.**

<><><>

**ಈಗ ವಾರ್ತೆಗಳ ವಿವರ**

<><><>

**ಬಾಬಾಸಾಹೇಬ ಅಂಬೇಡ್ಕರ್ ಅವರು ತಿಳಿಸಿದಂತೆ, ಶಿಕ್ಷಣ, ಸಂಘಟನೆ, ಹೋರಾಟಗಳು, ಶೋಷಿತ ವರ್ಗಗಳಿಗೆ ಮೂಲಮಂತ್ರವಾಗಬೇಕು. ಆಗ ಮಾತ್ರ ಸ್ವಾಭಿಮಾನದ ಬದುಕು ಕಟ್ಟಿಕೊಳ್ಳಲು ಸಾಧ್ಯ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದಿಸಿದ್ದಾರೆ. ಬೆಳಗಾವಿ ಜಿಲ್ಲೆ ಚಿಕ್ಕೋಡಿಯಲ್ಲಿ, ಕರ್ನಾಟಕ ರಾಜ್ಯ ಗೊಲ್ಲ, ಯಾದವ, ಹಣಬರ ಸಂಘದ ಶತಮಾನೋತ್ಸವ ಹಾಗೂ ಶ್ರೀ ಯಾದವಾನಂದ ಸ್ವಾಮಿಗಳ, 16ನೇ ಪಟ್ಟಾಭಿ ೇಕ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಅವರು ಮಾತನಾಡಿದರು. ಯಾದವ ಸಮುದಾಯಕ್ಕೆ ಅಭಿವೃದ್ಧಿ ನಿಗಮ ರಚನೆ, ಆರ್ಥಿಕ ಸಹಾಯ ಒದಗಿಸುವ ಬಗ್ಗೆ, ತಾವು ತೀರ್ಮಾನಿಸುವುದಾಗಿ, ಮುಖ್ಯಮಂತ್ರಿ ನುಡಿದರು.**

<><><>

**ಪರಿಶಿ ್ಟ ಜಾತಿ ಮತ್ತು ಪರಿಶಿ ್ಟ ಪಂಗಡಗಳ, ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಪಲ್ಲವಿ ಜಿ. ಅವರು, ಕಲಬುರಗಿ ತಾಲೂಕಿನ, ಕುಸನೂರು ಗ್ರಾಮದಲ್ಲಿ, ಬುಡ್ಗ ಜಂಗಮ ಸಮುದಾಯದ ಕುಟುಂಬಗಳು, ವಾಸಿಸುತ್ತಿರುವ ಸ್ಥಳ ವೀಕ್ಷಿಸಿ, ಅವರ ಸಮಸ್ಯೆಗಳನ್ನು ಆಲಿಸಿದರು. ಕಲಬುರಗಿಯ ರಾಣೇಶಪೀರ್ ದರ್ಗಾ ಆಶ್ರಯ ಕಾಲೋನಿಯಲ್ಲಿ ವಾಸಿಸಿರುವ ಬುಡ್ಗಜಂಗಮ ಕುಟುಂಬಗಳು, ತಾಲೂಕಿನ ಶರಣ ಶಿರಸಗಿ ಗ್ರಾಮದಲ್ಲಿನ ಅಂಬೇಡ್ಕರ್ ಕಾಲೊನಿಯ, ಅಲೆಮಾರಿ ಸಮುದಾಯಗಳ ಅಹವಾಲು ಆಲಿಸಿದರು.**

<><><>

ಪ್ರಧಾನಿಮಂತ್ರಿ ಬೆಳೆ ವಿಮೆ ಯೋಜನೆಯನ್ನು, ನೂತನ ತಂತ್ರಜ್ಞಾನ ಬಳಸಿ, ರಾಜ್ಯದಲ್ಲಿ ಪರಿಣಾಮಕಾರಿಯಾಗಿ ಅನು ಷ್ಠಾನಗೊಳಿಸಿದ್ದು, ದೇಶದ ಇತರೆ ರಾಜ್ಯಗಳಿಗೆ ಕರ್ನಾಟಕ ಮಾದರಿಯಾಗಿದೆ ಎಂದು, ಕೃಷಿ ಖಾತೆ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದ್ದಾರೆ. ಬೆಳಗಾವಿಯಲ್ಲಿ ಈ ವಿಷಯ ತಿಳಿಸಿದ ಸಚಿವರು, ಬೆಳಗಾವಿ ವಿಭಾಗ ಮಟ್ಟದಲ್ಲಿ 2 ಸಾವಿರದ 150 ಫಲಾನುಭವಿ ರೈತರಿಗೆ, ವಿವಿಧ ಯಂತ್ರೋಪಕರಣಗಳ ಸವಲತ್ತುಗಳನ್ನು, ಕೃಷಿ ಇಲಾಖೆ ಒದಗಿಸಿದೆ ಎಂದರು.

<><><>

ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರ, ತತ್ವಾದರ್ಶ, ವ್ಯಕ್ತಿತ್ವ ಮತ್ತು ಕೃತಿತ್ವ ದರ್ಶನದ ಮಹದೋದ್ದೇಶದಿಂದ, ಧಾರವಾಡದ ಗುಲಗಂಜಿಕೊಪ್ಪದಲ್ಲಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕರ್ಣಧಾರತ್ವದಲ್ಲಿ, ಸ್ಥಾಪಿತವಾದ ಗಾಂಧಿ ಭವನವನ್ನು, ಇಂದು ಬೆಳಗ್ಗೆ 10 ಗಂಟೆಗೆ, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ ಲೋಕಾರ್ಪಣೆಗೊಳಿಸಲಿದ್ದಾರೆ. ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ವಿಧಾನಸಭೆ ವಿಪಕ್ಷ ಸಹ ನಾಯಕ ಅರವಿಂದ ಬೆಲ್ಲದ, ಶಾಸಕ ವಿನಯ ಕುಲಕರ್ಣಿ ಸೇರಿದಂತೆ, ಅನೇಕ ಗಣ್ಯರು ಪಾಲ್ಗೊಳ್ಳಲಿದ್ದಾರೆ.

ಈ ಕುರಿತು ಒಂದು ವರದಿ..

*ಮುಖ್ಯಮಂತ್ರಿ ಸಿದ್ಧರಾಮಯ್ಯ, 2016-17 ನೇ ಸಾಲಿನ ಆಯವ್ಯಯದಲ್ಲಿ, ಪ್ರತಿ ಜಿಲ್ಲೆಯಲ್ಲೂ ಗಾಂಧಿ ಭವನ ನಿರ್ಮಾಣದ, ಯೋಜನೆ ಘೋಷಿಸಿ, ಗಾಂಧೀಜಿ ಅವರ ವಿಚಾರಧಾರೆ ಪ್ರಚುರ ಪಡಿಸುವ, ಆಶಯ ಮತ್ತು ಬದ್ಧತೆ ವ್ಯಕ್ತ ಪಡಿಸಿದ್ದರು.*

*2018 ರಲ್ಲಿ ಧಾರವಾಡದ ಗುಲಗಂಜಿಕೊಪ್ಪ ಗ್ರಾಮದಲ್ಲಿ, ಗಾಂಧಿ ಭವನ ನಿರ್ಮಾಣಕ್ಕಾಗಿ, 29 ಗುಂಟೆ ಜಾಗೆ ಹಾಗೂ 3 ಕೋಟಿ ರೂಪಾಯಿ ಅನುದಾನವನ್ನು, ರಾಜ್ಯ ಸರ್ಕಾರ ಒದಗಿಸಿತು.*

*ಗಾಂಧಿ ಕುಟೀರದ ಮಾದರಿಯಲ್ಲಿ ಭವನ ಸುಂದರವಾಗಿ ನಿರ್ಮಾಣಗೊಂಡಿದೆ. ನೂತನ ಗಾಂಧಿ ಭವನದ ಆಶಯಗಳ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಧಾರವಾಡ ಜಿಲ್ಲಾಧಿಕಾರಿ, ದಿವ್ಯಾ ಪ್ರಭು.*

<><><>

ವಿವೇಕ ಧ್ವನಿ 35 + ದಿವ್ಯಾ ಪ್ರಭು ಧ್ವನಿ 50 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ x ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

ಇಂದು, ರಾಷ್ಟ್ರೀಯ ನಾಗರಿಕ ಸೇವಾ ದಿನ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, 17ನೇ ನಾಗರಿಕ ಸೇವಾ ದಿನದ ಅಂಗವಾಗಿ ಇಂದು ಬೆಳಗ್ಗೆ 11 ಗಂಟೆಗೆ, ಹೊಸ ದಿಲ್ಲಿಯ ವಿಜ್ಞಾನ ಭವನದಲ್ಲಿ, ನಾಗರಿಕ ಸೇವಕರನ್ನುದ್ದೇಶಿಸಿ ಮಾತನಾಡಲಿದ್ದಾರೆ. ಸಾರ್ವಜನಿಕ ಆಡಳಿತದಲ್ಲಿ ಸೇವಾ ಶ್ರೇಷ್ಠತೆಗಾಗಿ, ರಾಷ್ಟ್ರ ಮಟ್ಟದ 16 ಪ್ರಶಸ್ತಿಗಳನ್ನು, ಪ್ರಧಾನಮಂತ್ರಿ ಪ್ರದಾನ ಮಾಡಲಿದ್ದಾರೆ.

<><><>

ರಾಜ್ಯ ಸರ್ಕಾರ, 2023ನೇ ಸಾಲಿನ, 30 ನಾಗರಿಕ ಸೇವಾ ರತ್ನ ಪ್ರಶಸ್ತಿಗಳನ್ನು ಪ್ರಕಟಿಸಿದೆ. ಧಾರವಾಡ ಜಿಲ್ಲೆ, ಹುಬ್ಬಳ್ಳಿ ಗ್ರಾಮೀಣ ತಹಸೀಲ್ದಾರ, ಜೆ.ಬಿ.ಮಜ್ಜಿಗಿ, ಸರ್ವೋತ್ತಮ ಸೇವಾ ರತ್ನ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಕಂದಾಯ ಇಲಾಖೆಯ, 'ಭೂಮಿ ಯೋಜನೆ'ಯನ್ನು ಜನಪರವಾಗಿ ಅನುಷ್ಠಾನಗೊಳಿಸಿದ ಹಿರಿಮೆ, ಅವರದ್ದು.

<><><>

ಬೆಂಗಳೂರಿನ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಇಂದು, ಮುಖ್ಯಮಂತ್ರಿಯವರಿಂದ, ಅವರು ಪ್ರಶಸ್ತಿ ಸ್ವೀಕರಿಸಲಿದ್ದಾರೆ.

<><><>

ಪ್ರದೇಶ ಸಮಾಚಾರಕ್ಕಾಗಿ, ಜೆ.ಬಿ. ಮಜ್ಜಿಗಿ, ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಜೆ.ಬಿ. ಮಜ್ಜಿಗಿ ಧ್ವನಿ 25 ಸೆಕೆಂದುಗಳು

<><><>

ಮುಂಬೈಯಲ್ಲಿ, ಮೇ ಒಂದರಿಂದ ನಾಲ್ಕರ ವರೆಗೆ ಆಯೋಜಿಸಲಾದ, ವಿಶ್ವ ಧ್ವನಿ– ದೃಶ್ಯ ಮತ್ತು ಮನರಂಜನಾ ಶೃಂಗಸಭೆ – ವೇವ್ಸ್ ಸಂದರ್ಭದಲ್ಲಿ, ಪ್ರಧಾನಮಂತ್ರಿ ನರೇಂದ್ರ ಮೋದಿ, ಜಾಗತಿಕ ಮಾಧ್ಯಮ ಮಾತುಕತೆಯ, ಮುಂದಾಳತ್ವ ವಹಿಸಲಿದ್ದಾರೆ. 'ಭಾರತದಲ್ಲಿ ಸೃಷ್ಟಿಸಿ; ವಿಶ್ವಕ್ಕಾಗಿ ಸೃಷ್ಟಿಸಿ' ದೃಷ್ಟಿಕೋನದೊಂದಿಗೆ, ಭಾರತವನ್ನು ಜಾಗತಿಕ ಮಾಧ್ಯಮ ಮನೋರಂಜನಾ ಕೇಂದ್ರವನ್ನಾಗಿಸುವ ಯೋಜನೆಗೆ, ಪ್ರಧಾನಮಂತ್ರಿ ಅವರು, ಶಿಲಾನ್ಯಾಸ ನೆರವೇರಿಸಲಿದ್ದಾರೆ.

<><><>

ದೇಶಗಳ ನಡುವೆ, ಧ್ವನಿ ಮತ್ತು ದೃಶ್ಯ ಮಾಧ್ಯಮದ ಸೃಜನಶೀಲರನ್ನು ಬೆಸೆಯಲು, ಮಾಧ್ಯಮ ಹಾಗೂ ಮನೋರಂಜನಾ ವಲಯದಲ್ಲಿ, ಅಂತಾರಾಷ್ಟ್ರೀಯ ಸಹಭಾಗಿತ್ವ ಹೆಚ್ಚಿಸಲು, ವೇವ್ಸ್ ಶೃಂಗಸಭೆ ಉತ್ತಮ ವೇದಿಕೆಯಾಗಿದೆ.

<><><>

ಸೃಜನಶೀಲ ವೃತ್ತಿಪರರು, ನೀತಿ ನಿರೂಪಕರು, ಉದ್ಯಮದ ಪ್ರಮುಖರು, ತಂತ್ರಜ್ಞಾನ ಕಂಪೆನಿಗಳು, ನವೋದ್ಯಮಗಳು ಹಾಗೂ ಹೂಡಿಕೆದಾರರನ್ನು ವೇವ್ಸ್ ಶೃಂಗಸಭೆ, ಒಂದೇ ವೇದಿಕೆಗೆ ತರಲಿದೆ.

<><><>

ಈ ವರ್ಷದಿಂದ, ಭೂ ಅಭಿವೃದ್ಧಿ ಬ್ಯಾಂಕ್‌ನಿಂದ, ರೈತರು ಪಡೆದುಕೊಳ್ಳುವ ಮಧ್ಯಮಾವಧಿ ಸಾಲದ ಬಡ್ಡಿಯನ್ನು, ರಾಜ್ಯ ಸರ್ಕಾರವೇ ಭರಿಸಲಿದೆ ಎಂದು, ಸಹಕಾರ ಖಾತೆ ಸಚಿವ ಕೆ.ಎನ್.ರಾಜಣ್ಣ ತಿಳಿಸಿದ್ದಾರೆ. ಚಿಕ್ಕಮಗಳೂರು ಜಿಲ್ಲೆ, ಸಂಗಮೇಶ್ವರಪೇಟೆಯ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ, ಅಮೃತ ಮಹೋತ್ಸವ ಉದ್ಘಾಟಿಸಿ, ಅವರು ಮಾತನಾಡಿದರು. ರಾಜ್ಯ ಸರ್ಕಾರ, ಶೂನ್ಯ ಬಡ್ಡಿ ದರದಲ್ಲಿ, ರೈತರಿಗೆ ಸಾಲ ನೀಡುತ್ತಿದೆ. ಮಧ್ಯಮಾವಧಿ ಸಾಲಕ್ಕೂ ಕೂಡ, ಶೇಕಡ 3ರ ಬಡ್ಡಿ ದರದಲ್ಲಿ, ಸಾಲ ಒದಗಿಸಲಾಗುತ್ತಿದೆ ಎಂದರು.

<><><>

ರಾಜ್ಯದ ಅನುದಾನಿತ ಹಾಗೂ ಅನುದಾನ ರಹಿತ ಖಾಸಗಿ ಶಾಲೆಗಳು, ಪೂರ್ವ ಪ್ರಾಥಮಿಕ ಹಂತದಿಂದ, ಪ್ರೌಢ ಶಾಲೆ ಹಂತದ ವರೆಗಿನ, ಪ್ರವೇಶ ಪ್ರಕ್ರಿಯೆಯಲ್ಲಿ, ಶೇಕಡ 50ರ ಷ್ಟು ಸೀಟುಗಳನ್ನು, ಹೆಣ್ಣು ಮಕ್ಕಳಿಗೆ ಮೀಸಲಿಡುವುದನ್ನು, ಕಡ್ಡಾಯಗೊಳಿಸಿ, ಶಾಲಾ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ. ರಾಜ್ಯ ಪಠ್ಯಕ್ರಮ ಹಾಗೂ ಸಿ.ಬಿ.ಎಸ್.ಇ., ಐ.ಸಿ.ಎಸ್.ಇ. ಸೇರಿದಂತೆ, ಕೇಂದ್ರದ ಪಠ್ಯಕ್ರಮ ಅನುಸರಿಸುವ, ಸಹ ಶಿಕ್ಷಣ ಮಾದರಿಯ, ಎಲ್ಲ ಖಾಸಗಿ ಶಾಲೆಗಳು, ಎಲ್.ಕೆ.ಜಿ., ಯು.ಕೆ.ಜಿ., ಒಂದನೇ ತರಗತಿ ಯಿಂದ 10ನೇ ತರಗತಿ ವರೆಗೆ ಪ್ರವೇಶ ನೀಡುವಾಗ, ಈ ನಿಯಮ ಕಡ್ಡಾಯವಾಗಿ ಪಾಲಿಸುವಂತೆ, ಸೂಚಿಸಲಾಗಿದೆ. ಒಂದು ವೇಳೆ ನಿರೀಕ್ಷಿತ ಅರ್ಜಿಗಳು ಲಭ್ಯವಿಲ್ಲದೇ ಇದ್ದಾಗ, ಉಳಿಕೆ ಸೀಟುಗಳನ್ನು ಬಾಲಕರಿಗೆ ನೀಡಬಹುದಾಗಿದೆ.

<><><>

ರಾಷ್ಟ್ರೀಯ, ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮದಡಿ, 7ನೇ ಸುತ್ತಿನ ಲಸಿಕಾ ಅಭಿಯಾನ, ಇಂದಿನಿಂದ ಜೂನ್ 4ರ ವರೆಗೆ ನಡೆಯಲಿದೆ. ಕಾಲು, ಬಾಯಿ ರೋಗ ಮತ್ತು ಚರ್ಮಗಂಟು ರೋಗದ ವಿರುದ್ಧ, ಲಸಿಕೆಯನ್ನು ಏಕಕಾಲಕ್ಕೆ ರಾಜ್ಯಾದ್ಯಂತ ರಾಸುಗಳಿಗೆ ಹಾಕಲಾಗುತ್ತಿದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಹುಬ್ಬಳ್ಳಿಯ ಶಿರೂರ್ ಪಾರ್ಕ್‌ನಲ್ಲಿ ಸಂಭವಿಸಿದ, ರಸ್ತೆ ಅಪಘಾತದಲ್ಲಿ ಗಾಯಗೊಂಡ, ದ್ವಿಚಕ್ರ ವಾಹನ ಸವಾರರನ್ನು, ತಮ್ಮ ಬೆಂಗಾವಲು ಪಡೆ ವಾಹನದಲ್ಲಿ, ಕೆ.ಎಂ.ಸಿ.ಗೆ ದಾಖಲಿಸಿ, ಮಾನವೀಯತೆ ಮೆರೆದಿದ್ದಾರೆ.

<><><>

ಭಾರತೀಯ ವಾಯುಪಡೆಯಲ್ಲಿ ಅಗ್ನಿವೀರ ಹುದ್ದೆಗಾಗಿ, ಅರ್ಜಿ ಆಹ್ವಾನಿಸಲಾಗಿದೆ. ಇಂದಿನಿಂದ, ಮೇ 11ರ ವರೆಗೆ, ಆನ್ಲೈನ್‌ನಲ್ಲಿ ಆಸಕ್ತರು ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ, ಜಿಲ್ಲಾ ಉದ್ಯೋಗಾಧಿಕಾರಿಯನ್ನು ಸಂಪರ್ಕಿಸಬಹುದು.

<><><>

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ, ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಪಲ್ಲವಿ ಜಿ. ಅವರು, ಕಲಬುರಗಿಯಲ್ಲಿ ನಾಳೆ ಬೆಳಗ್ಗೆ 10 ಗಂಟೆಗೆ, ಜಿಲ್ಲಾಧಿಕಾರಿ ಕಚೇರಿಯಲ್ಲಿ, ಅಹವಾಲು ಆಲಿಸಲಿದ್ದಾರೆ.

<><><>

ಇದೇ 24, ಗುರುವಾರದಿಂದ, ಮೇ 8 ಗುರುವಾರದ ವರೆಗೆ, ದ್ವಿತೀಯ ಪಿಯುಸಿ 2ನೇ ವಾರ್ಷಿಕ ಪರೀಕ್ಷೆ, ರಾಜ್ಯಾದ್ಯಂತ ನಡೆಯಲಿದೆ.

<><><>

ಬಾಗಲಕೋಟೆ ಜಿಲ್ಲೆ, ಕೂಡಲ ಸಂಗಮದಲ್ಲಿ, ಇದೇ 29 ಹಾಗೂ 30 ರಂದು ಆಯೋಜಿತ, ಅನುಭವ ಮಂಟಪ: ಬಸವಾದಿ ಶರಣ ವೈಭವ, ಕಾರ್ಯಕ್ರಮದ ರಥಯಾತ್ರೆ, ದಾವಣಗೆರೆ ತಲುಪಿದೆ.

<><><>

ರಾಜ್ಯದ 31 ಜಿಲ್ಲೆಗಳಲ್ಲಿ, ಯೂತ್ ರೆಡ್ ಕ್ರಾಸ್ ಸೊಸಾಯಿಟಿಯನ್ನು ಸುದೃಢ ಗೊಳಿಸಲಾಗುವುದು ಎಂದು, ಭಾರತೀಯ ರೆಡ್ ಕ್ರಾಸ್ ಸೊಸಾಯಿಟಿ ರಾಜ್ಯಾಧ್ಯಕ್ಷ, ಬಸ್ರೂರು ರಾಜೀವ್ ಶೆಟ್ಟಿ, ಮಡಿಕೇರಿಯಲ್ಲಿ ಹೇಳಿದ್ದಾರೆ.

<><><>

ಬಳ್ಳಾರಿಯಲ್ಲಿ, ಸಂಸ್ಕೃತ ಭಾರತಿ, ಚಂದ್ರಶೇಖರ ನೇತೃತ್ವದಲ್ಲಿ, ಹತ್ತು ದಿನಗಳ ಸಂಸ್ಕೃತ ಸಂಭಾಷಣ ಶಿಬಿರವನ್ನು ಮಕ್ಕಳಿಗಾಗಿ, ಆಯೋಜಿಸಿತ್ತು.

<><><>

ಉತ್ತರಕನ್ನಡ ಜಿಲ್ಲೆಯ, ಹೊನ್ನಾವರದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ, ಮಂಕಾಳ ವೈದ್ಯ ಜನತಾ ದರ್ಶನ ನಡೆಸಿದರು.

<><><>

ಸೈಬರ್ ಅಪರಾಧಿಗಳಿಂದ ವಂಚನೆಗೆ ಒಳಗಾಗಿದ್ದಲ್ಲಿ, ಜಾಲತಾಣ **www.cyber crime.gov.in** ನಲ್ಲಿ ವರದಿ ಮಾಡುವಂತೆ ಅಥವಾ ಸಹಾಯವಾಣಿ **1-9-3-0** ಗೆ ಕರೆ ಮಾಡಿ, ದೂರು ದಾಖಲಿಸುವಂತೆ ಕೋರಲಾಗಿದೆ.

<><><>

ಬಾಲ ಹಾಗೂ ಕಿಶೋರ ಕಾರ್ಮಿಕರು ಕಂಡುಬಂದಲ್ಲಿ, ಮಕ್ಕಳ ಉಚಿತ ಸಹಾಯವಾಣಿ ಸಂಖ್ಯೆ **1098** ಕ್ಕೆ ಕರೆ ಮಾಡಿ, ಮಾಹಿತಿ ನೀಡಬಹುದು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಶಿಕ್ಷಣ, ಸಂಘಟನೆ, ಹೋರಾಟ, ಶೋಷಿತ ವರ್ಗಗಳಿಗೆ ಸ್ವಾಭಿಮಾನದ ಬದುಕು ಕಟ್ಟಿಕೊಡಬಲ್ಲದು – ಮುಖ್ಯಮಂತ್ರಿ ಸಿದ್ದರಾಮಯ್ಯ.
- ಧಾರವಾಡದ ಗುಲಗಂಜಿಕೊಪ್ಪದಲ್ಲಿ, ಇಂದು ಬೆಳಗ್ಗೆ **10** ಗಂಟೆಗೆ, ಗಾಂಧಿ ಭವನ ಲೋಕಾರ್ಪಣೆ.
- ಇಂದು, ರಾಷ್ಟ್ರೀಯ ನಾಗರಿಕ ಸೇವಾ ದಿನ; ಸೇವಾ ಶ್ರೇಷ್ಠತೆಗಾಗಿ, ಅಧಿಕಾರಿಗಳಿಗೆ ಪುರಸ್ಕಾರ ಪ್ರದಾನ.
- 'ಭಾರತದಲ್ಲಿ ಸೃಷ್ಟಿಸಿ; ವಿಶ್ವಕ್ಕಾಗಿ ಸೃಷ್ಟಿಸಿ'; ಮುಂಬೈ 'ವೇವ್ಸ್ ವಿಶ್ವ ಶೃಂಗಸಭೆ'ಗೆ, ಪ್ರಧಾನಮಂತ್ರಿ ಮುಂದಾಳತ್ವ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ **7** ಗಂಟೆ **35** ನಿಮಿಷಕ್ಕೆ.

<><><>